KATK010056102023

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ ಸಂ.125/2023**

ಪ್ರಾ.ಸಾ. : **23**

ದೋ.ಸಾ. : **33**

ದಿ.**24.10.2025**

ಹೆಸರು : ಸಂತೋಷ್ ಡಿ.ಆರ್.

ತಂದೆಯ ಹೆಸರು : ರಾಜಶೇಖರಪ್ಪ

ವಯಸ್ಸು : **41** ವರ್ಷ

ಉದ್ಯೋಗ : ಮುಖ್ಯ ಪೇದೆ ನಂ.**290,** ಕ್ಯಾತ್ಸಂದ್ರ ಪೋಲೀಸ್ ಠಾಣೆ

ವಾಸಸ್ಥಳ : ಕ್ಯಾತ್ಸಂದ್ರ, ತುಮಕೂರು

ಸಾಕ್ಷಿಯನ್ನು ಕರೆಸಿ, ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

1. ದಿನಾಂಕ 15.08.2018 ರಿಂದ 19.07.2024 ರವರೆಗೆ ನಾನು ಕ್ಯಾತ್ಸಂದ್ರ ವೃತ್ತ ಕಚೇರಿಯಲ್ಲಿ ಪೋಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ದಿ.19.07.2024 ರಂದು ನಾನು ಮುಖ್ಯ ಪೇದೆಯಾಗಿ ಬಡ್ತಿ ಹೊಂದಿದ್ದೇನೆ.
2. ದಿನಾಂಕ.20.03.2023 ರಂದು ಕ್ಯಾತ್ಸಂದ್ರ ವೃತ್ತದ ಸಿಪಿಐ ಶ್ರೀ.ಚನ್ನೇಗೌಡ ಆರ್.ಜಿ.ರವರು ಹೇಳಿದಂತೆ ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಪಾಂಡುರಂಗ ಅಲಿಯಾಸ್ ಗಿರೀಶ್ ರವರ ಮೃತದೇಹದ ತನಿಖೆ ಮಾಡುವ ಸಂದರ್ಭದಲ್ಲಿ ಮಾಡಿದ ಮಹಜರನ್ನು ಡೆಲ್ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿರುತ್ತೇನೆ.
3. ದಿನಾಂಕ.22.03.2023 ರಂದು ಆರೋಪಿ ಅಣ್ಣಪ್ಪಸ್ವಾಮಿ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆ ಮತ್ತು ಅದೇ ದಿನ ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ಶಿವಸ್ವಾಮಿ ಅಲಿಯಾಸ್ ಸ್ವಾಮಿ ಬಟ್ಟೆಯನ್ನು ಹಾಜರು ಮಾಡಿದ ಕಾಲಕ್ಕೆ ಮಾಡಿದ

ಪಂಚನಾಮೆಯನ್ನು ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಸದರಿ ಡೆಲ್ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿರುತ್ತೇನೆ.

4. ದಿ.28.03.2023 ರಂದು ಕ್ಯಾತ್ಸಂದ್ರ ವೃತ್ತ ಕಚೇರಿಯಲ್ಲಿ ಮೃತ ಪಾಂಡುರಂಗ ಅಲಿಯಾಸ್ ಗಿರೀಶ್ ರವರ ಶೇಖರಿಸಿದ ರಕ್ತ, ವಿಸೆರಾ ಮತ್ತು ಬಟ್ಟೆ ಅಮಾನತ್ತು ಪಂಚನಾಮೆಯನ್ನು ಸದರಿ ಡೆಲ್ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿರುತ್ತೇನೆ. ನನಗೆ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡುವ ಜ್ಞಾನವಿದೆ ಮತ್ತು ಹ್ಯಾಂಡಿ ಕ್ಯಾಮ್ ಕ್ಯಾಮರಾದಲ್ಲಿ ಫೋಟೋ ತೆಗೆಯುವ ಜ್ಞಾನ ಇದೆ. ನಾನು ಡೆಲ್ ಲ್ಯಾಪ್ ಟಾಪನ್ನು ಉಪಯೋಗಿಸಿದಾಗ ಅದು ಸುಸ್ಥಿತಿಯಲ್ಲಿತ್ತು ಮತ್ತು ಕಾರ್ಯ ನಿರ್ವಹಿಸುತ್ತಿತ್ತು. ಈ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ 65-ಬಿ ಅಡಿಯಲ್ಲಿ ದೃಢೀಕರಣ ಪತ್ರವನ್ನು ಕೊಟ್ಟಿರುತ್ತೇನೆ. ಅದನ್ನು ಈಗ ನೋಡುತ್ತಿದ್ದು ಅದನ್ನು ನಿಶಾನೆ ಪಿ50 ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ50(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ.ಆರ್.ಬಾಲಕೃಷ್ಣ, ಮುಖ್ಯ ಕಾನೂನು ಅಭಿರಕ್ಷಕರಿಂದ ಆರೋಪಿತನ ಪರವಾಗಿ:**

5. ನಮ್ಮ ಇಲಾಖೆಯಲ್ಲಿ ಲ್ಯಾಪ್ ಟಾಪ್ ಉಪಯೋಗಿಸುವ ಬಗ್ಗೆ ತರಬೇತಿ ಆಗಿದೆ. ಅದರ ಬಗ್ಗೆ ಪ್ರಮಾಣಪತ್ರ ಇಲ್ಲ. ನನಗೆ ಲ್ಯಾಪ್ ಟಾಪ್ ಉಪಯೋಗಿಸುವ ಬಗ್ಗೆ ಯಾವುದೇ ತರಬೇತಿ ಆಗಿಲ್ಲ ಎಂದರೆ ಸರಿಯಲ್ಲ.

6. ದಿನಾಂಕ.20.03.2023 ರಂದು ಕ್ಯಾತ್ಸಂದ್ರ ವೃತ್ತದ ಸಿಪಿಐ ಶ್ರೀ.ಚನ್ನೇಗೌಡ ಆರ್.ಜಿ.ರವರು ಹೇಳಿದಂತೆ ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಮೃತ ಪಾಂಡುರಂಗ ಅಲಿಯಾಸ್ ಗಿರೀಶ್ ರವರ ಮೃತದೇಹದ ತನಿಖೆ ಮಾಡುವ ಸಂದರ್ಭದಲ್ಲಿ ಮಾಡಿದ ಮಹಜರನ್ನು ಡೆಲ್ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಿನಾಂಕ.22.03.2023 ರಂದು ಆರೋಪಿ ಅಣ್ಣಪ್ಪಸ್ವಾಮಿ ತೋರಿಸಿದ ಕೃತ್ಯ ನಡೆದ ಸ್ಥಳದ ಪಂಚನಾಮೆ ಮತ್ತು ಅದೇ ದಿನ ಹೆಬ್ಬೂರು ಪೋಲೀಸ್ ಠಾಣೆಯಲ್ಲಿ ಶಿವಸ್ವಾಮಿ ಅಲಿಯಾಸ್ ಸ್ವಾಮಿ ಬಟ್ಟೆಯನ್ನು ಹಾಜರು ಮಾಡಿದ ಕಾಲಕ್ಕೆ ಮಾಡಿದ ಪಂಚನಾಮೆಯನ್ನು ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಸದರಿ ಡೆಲ್ ಲ್ಯಾಪ್

ಟಾಪಿನಲ್ಲಿ ಟೈಪ್ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**8.** ದಿ.**28.03.2023** ರಂದು ಕ್ಯಾತ್ಸಂದ್ರ ವೃತ್ತ ಕಚೇರಿಯಲ್ಲಿ ಮೃತ ಪಾಂಡುರಂಗ ಅಲಿಯಾಸ್ ಗಿರೀಶ್ ರವರ ಶೇಖರಿಸಿದ ರಕ್ತ, ವಿಸೆರಾ ಮತ್ತು ಬಟ್ಟೆ ಅಮಾನತ್ತು ಪಂಚನಾಮೆಯನ್ನು ಸದರಿ ಡೆಲ್ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡಿರುತ್ತೇನೆ, ನನಗೆ ಲ್ಯಾಪ್ ಟಾಪಿನಲ್ಲಿ ಟೈಪ್ ಮಾಡುವ ಜ್ಞಾನವಿದೆ ಮತ್ತು ಹ್ಯಾಂಡಿ ಕ್ಯಾಮ್ ಕ್ಯಾಮರಾದಲ್ಲಿ ಫೋಟೋ ತೆಗೆಯುವ ಜ್ಞಾನ ಇದೆ ಮತ್ತು ನಾನು ಡೆಲ್ ಲ್ಯಾಪ್ ಟಾಪನ್ನು ಉಪಯೋಗಿಸಿದಾಗ ಅದು ಸುಸ್ಥಿತಿಯಲ್ಲಿತ್ತು ಮತ್ತು ಕಾರ್ಯ ನಿರ್ವಹಿಸುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಟೈಪಿಂಗ್ ಕೆಲಸ ಮಾಡದೇ ಇದ್ದರೂ ಕೂಡಾ ತನಿಖಾಧಿಕಾರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು